‘‘ಅದು ಬಹಳ ಸುಲಭ... ಅವಲಕ್ಕಿಸರದ ಕೊಂಡಿಯ ಎರಡೂ ಬದಿ ಸಣ್ಣ ಹೂವಿನ ದಳದ ಆಕಾರದ ಬಿಲ್ಲೆಗಳಿರುತ್ತವೆಯಲ್ಲವೇ? ಎರಡೂ ಬಿಲ್ಲೆಗಳ ಮೇಲೆ ನನ್ನಮ್ಮ ರೂಪಾ–ದೀಪಾ ಎಂದು ನನ್ನ ಮಕ್ಕಳ ಹೆಸರು ಬರೆಸಿದ್ದಾಳೆ. ಅದನ್ನು ನೋಡಿದರೆ ಆ ಸರವು ನಮ್ಮದೇ ಹೌದೋ, ಅಲ್ಲವೋ ಎಂದು ತಮಗೇ ಗೊತ್ತಾಗುತ್ತದೆ...’’ ಅದುವರೆಗೂ ಪೆಚ್ಚುಮೋರೆ ಹಾಕಿ ಕುಳಿತಿದ್ದ ಅವನ ಹೆಂಡತಿ, ನನ್ನ ಮಾತಿನಿಂದ, ತಮ್ಮ ಕಳೆದುಹೋದ ಸರವು ಇನ್ನೇನು ಸಿಕ್ಕೇಬಿಟ್ಟಿತು ಎಂಬಂತಹ ಉತ್ಸಾಹದಲ್ಲಿ ಹೇಳಿದಳು.

ನನಗೆ ಏನೂ ತೋಚದಂತಾಗಿ, ಶ್ರೀನಿವಾಸ್ ಕಡೆ ತಿರುಗಿ ಹೇಳಿದೆ: ‘‘ಸರ್, ನನಗೆ ಸಿಕ್ಕಿದ್ದು ಅವಲಕ್ಕಿಸರವೆಂಬುದು ನಿಜ. ಅದು ಇವರದೇ ಕೂಡ ಆಗಿರಬಹುದು. ಇವರು ಹೇಳಿದ ಗುರುತು ಪರಿಶೀಲಿಸಿದರೆ ಅದು ಇವರದ್ದೇ ಹೌದೋ, ಅಲ್ಲವೋ ಎಂಬುದು ನಿಖರವಾಗಿ ತಿಳಿಯುತ್ತದೆ. ಆದರೆ ಅದನ್ನು ಪರಿಶೀಲಿಸಿ ಅವರಿಗದನ್ನು ಹಸ್ತಾಂತರಿಸಲು, ಆ ಸರವೀಗ ನಮ್ಮ ಬಳಿಯಲ್ಲಿಲ್ಲ. ಅದರ ಮಾಲೀಕರನ್ನು ಹುಡುಕುವ

